# ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು

ವಿಷಯ: ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ವಾಹನ ಚಾಲಕರ ಹುದ್ದೆ ಗಳನ್ನು ಪುನರ್ ವ್ಯವಸ್ಥೆಯಿಂದ ಸ್ಥಳಾಂತರಿಸುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂ.ಆಇ 170 ವಾತೆಸಿ 2011, ದಿನಾಂಕ:27-08-2011.
2) ಸರ್ಕಾರದ ಆದೇಶ ಸಂ.ಆಇ.121 ವಾತೆಸಿ. 94, ದಿನಾಂಕ:04-02-1995.

****

**ಪ್ರಸ್ತಾವನೆ:**

ಸರ್ಕಾರದ ಉಲ್ಲೇಖ (1) ರ ಆದೇಶದನ್ವಯ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ 215 ವಾಹನ ಚಾಲಕರ ಹುದ್ದೆಗಳು ಮಂಜೂರಾಗಿರುತ್ತವೆ.

ಈ ರೀತಿ ಮಂಜೂರಾಗಿರುವ ಹುದ್ದೆಗಳ ಪೈಕಿ ಪ್ರಸ್ತುತ ಆಡಳಿತ ವಿಭಾಗಗಳಿಗೆ ಹೋಲಿಕೆ ಮಾಡಿದಾಗ ಜಾರಿ ಕಛೇರಿಗಳಿಗೆ/ವಲಯಗಳಿಗೆ ಹೆಚ್ಚುವರಿಯಾಗಿ ವಾಹನ ಚಾಲಕರ ಹುದ್ದೆಗಳನ್ನು ಒದಗಿಸಲಾಗಿರುತ್ತದೆ. ಆಡಳಿತ ವಿಭಾಗಗಳಲ್ಲಿಯ ಕಛೇರಿಗಳ ಕಾರ್ಯಭಾರವನ್ನು ಅವಲೋಕಿಸಿದಾಗ ಆಡಳಿತ ವಿಭಾಗಗಳಲ್ಲಿಯೂ ಲೆಕ್ಕಪರಿಶೋಧನೆ ಹಾಗೂ ನಂತರದ ಪೂರಕ ಕಾರ್ಯಗಳನ್ನು ಕೈಗೊಂಡು ಸೃಜಿಸಲಾದ ಹೆಚ್ಚುವರಿ ತೆರಿಗೆಯನ್ನು ವಸೂಲಿ ಮಾಡಲು ವ್ಯಾಪಾರ ಸ್ಥಳಗಳಿಗೆ ಭೇಟಿ ನೀಡುವ ಉದ್ದೇಶಕ್ಕಾಗಿ ವಾಹನಗಳನ್ನು ಉಪಯೋಗಿಸುವ ಅವಶ್ಯಕತೆ ಇರುತ್ತದೆ.

ಮುಂದುವರೆದಂತೆ, ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ ಹಾಗೂ ವಲಯ ಕಛೇರಿಗಳಿಗೆ ಮಂಜೂರಾಗಿರುವ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಅಪರ ಆಯುಕ್ತರುಗಳಿಗೆ ವಾಹನ ಚಾಲಕರ ಹುದ್ದೆಗಳನ್ನು ಒದಗಿಸಿರುವುದಿಲ್ಲ. ಕೇಂದ್ರ ಕಛೇರಿಯಲ್ಲಿ / ವಲಯ ಕಛೇರಿಗಳಲ್ಲಿ ಅಪರ ಆಯುಕ್ತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಕಾರ್ಯಬಾಹುಳ್ಯವನ್ನು ಅವಲೋಕಿಸಿ ಅವರಿಗೆ ಒದಗಿಸಿರುವ ವಾಹನಗಳನ್ನು ಚಾಲನೆ ಮಾಡಲು ವಾಹನ ಚಾಲಕರನ್ನು ಒದಗಿಸುವ ಉದ್ದೇಶಕ್ಕಾಗಿ ವಾಹನ ಚಾಲಕರ ಹುದ್ದೆಗಳನ್ನು ಸ್ಥಳಾಂತರಿಸುವ ಅವಶ್ಯಕತೆ ಉಂಟಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಇಲಾಖೆಯ ಜಾರಿ ವಲಯಗಳಿಗೆ ಮಂಜೂರಾಗಿರುವ ವಾಹನ ಚಾಲಕರ ಕೆಲವು ಹುದ್ದೆಗಳನ್ನು ಸದರಿ ವಲಯಗಳಿಂದ ಆಡಳಿತ ವಿಭಾಗಗಳಿಗೆ ಹಾಗೂ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ/ವಲಯ ಕಛೇರಿಗಳಿಗೆ ರಾಜ್ಯದ ರಾಜಸ್ವ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಸ್ಥಳಾಂತರಿಸಲು ಪ್ರಸ್ತಾಪಿಸಲಾಗಿದೆ.

**ಕೋಷ್ಟಕ**

| ಕ್ರ. ಸಂ. | ಪ್ರಸ್ತುತ ವಾಹನ ಚಾಲಕರ ಹುದ್ದೆಗಳು ಮಂಜೂರಾಗಿರುವ ಕಛೇರಿಗಳು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಹುದ್ದೆಗಳನ್ನು ಸ್ಥಳಾಂತರಗೊಳಿಸ ಬೇಕಾಗಿರುವ ಕಛೇರಿ ಮತ್ತು ಸ್ಥಳ | ಸ್ಥಳಾಂತರಿಸಲು ಪ್ರಸ್ತಾಪಿಸಿರುವ ಹುದ್ದೆಗಳ ಸಂಖ್ಯೆ | ಅಂಕಣ 4 ರಲ್ಲಿ ನಮೂದಿಸಿರುವ ಕಛೇರಿಗಳಲ್ಲಿ ಪ್ರಸ್ತುತ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಸ್ಥಳಾಂತರಿಸಿದ ನಂತರ ಅಂಕಣ 4 ರಲ್ಲಿ ನಮೂದಿಸಿರುವ ಕಛೇರಿಗಳಲ್ಲಿ ಲಭ್ಯವಾಗುವ ಹುದ್ದೆಗಳ ಸಂಖ್ಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ) ದಕ್ಷಿಣ ವಲಯ, ಬೆಂಗಳೂರು | 67 | ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಬೆಂಗಳೂರು | 7 | 2 | 9 |
| | | | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು, (ವಲಯ)-1, 2 ಮತ್ತು 3 ಬೆಂಗಳೂರು ತಲಾ 1 ರಂತೆ | 3 | 0 | 3 |
| | | | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ) ಡಿ.ಜಿ. & ಎಸ್.ಟಿ.ಓ– 1 ರಿಂದ 6, ಬೆಂಗಳೂರು ತಲಾ 4 ರಂತೆ | 24 | 0 | 24 |
| 2 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಮೈಸೂರು ವಲಯ, ಮೈಸೂರು | 9 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿ.ಜಿ. & ಎಸ್.ಟಿ.ಓ, ಮೈಸೂರು ವಿಭಾಗ, ಮೈಸೂರು. | 3 | 2 | 5 |
| 3 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಪಶ್ಚಿಮ ವಲಯ, ಮಂಗಳೂರು | 11 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿ.ಜಿ. & ಎಸ್.ಟಿ.ಓ., ಮಂಗಳೂರು ವಿಭಾಗ, ಮಂಗಳೂರು. | 5 | 7 | 12 |
| 4 | ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ) 1 ರಿಂದ 3, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಮಲೆನಾಡು ವಿಭಾಗ, ಶಿವಮೊಗ್ಗ. | 3 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿ.ಜಿ. & ಎಸ್.ಟಿ.ಓ , ಮಲೆನಾಡು ವಿಭಾಗ, ಶಿವಮೊಗ್ಗ | 3 | 2 | 5 |

| | | | | | |
|---|---|---|---|---|---|
| 5 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ | 11 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಡಿ.ಜಿ. & ಎಸ್.ಟಿ.ಓ, ಬೆಳಗಾವಿ ವಿಭಾಗ, ಬೆಳಗಾವಿ. | 3 | 3 | 6 |
| 6 | ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ) 1 ರಿಂದ 4, ದಾವಣಗೆರೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಕೇಂದ್ರ ವಲಯ, ಬಳ್ಳಾರಿ | 5 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಡಿ.ಜಿ. & ಎಸ್.ಟಿ.ಓ , ದಾವಣಗೆರೆ. | 2 * | 2 | 4 |

*** ಸರ್ಕಾರದ ಆದೇಶ ಸಂಖ್ಯೆ: ಆಇ 170 ವಾತೆಸಿ 2011 ದಿನಾಂಕ:07-08-2014 ರನ್ವಯ ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-5, ದಾವಣಗೆರೆ ಈ ಹುದ್ದೆಯನ್ನು ಚಿತ್ರದುರ್ಗಕ್ಕೆ ಸ್ಥಳಾಂತರಿಸಿದ ನಂತರ ಮೂಲ ಕಛೇರಿಯಲ್ಲಿ ಉಳಿದ ಒಂದು ವಾಹನ ಚಾಲಕರ ಹುದ್ದೆ ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)-4, ದಾವಣಗೆರೆ ಈ ಅಧಿಕಾರಿಗೆ ಒದಗಿಸಿರುವ ಒಂದು ವಾಹನ ಚಾಲಕರ ಹುದ್ದೆಯನ್ನು ಸ್ಥಳಾಂತರಿಸಲು ಪ್ರಸ್ತಾಪಿಸಲಾಗಿದೆ.**

ಉಲ್ಲೇಖ (2)ರ ಸರ್ಕಾರದ ಆದೇಶ ಸಂಖ್ಯೆ:ಆಇ 121 ವಾತೆಸಿ.94 ದಿ:04-02-1995 ರಲ್ಲಿ ವಾಣಿಜ್ಯ ತೆರಿಗೆಗಳ ಇಲಾಖೆಯ ಯಾವುದೇ ಕೇಂದ್ರ ಕಾರ್ಯಸ್ಥಾನದಲ್ಲಿರುವ ಕಛೇರಿಗಳನ್ನು ಅದೇ ಕೇಂದ್ರ ಕಾರ್ಯಸ್ಥಾನದಲ್ಲಿರುವಂತೆ ಪುನರ್ ವಿಂಗಡಿಸುವ, ಸ್ಥಳಾಂತರಿಸುವ ಮತ್ತು ಪುನರ್ ವ್ಯವಸ್ಥೆ ಮಾಡುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ನೀಡಲಾಗಿದೆ.

ಆದುದರಿಂದ ಈ ಕೆಳಕಂಡಂತೆ ಆದೇಶ.

## ಆದೇಶ ಸಂಖ್ಯೆ: ಸಿಬ್ಬಂದಿ-3/3ಎಫ್/ಸಿಆರ್.03/18-19, ದಿನಾಂಕ: 30-07-2018

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಉಲ್ಲೇಖ (2)ರ ಸರ್ಕಾರದ ಆದೇಶ ದಿನಾಂಕ: 04-02-1995 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಕರ್ ಎಂ.ಎಸ್., ಭಾ.ಆ.ಸೇ., ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು, ಆದ ನಾನು ಕೆಳಗಿನ ಕೋಷ್ಟಕದ ಅಂಕಣ-2 ರಲ್ಲಿ ಕಾಣಿಸಿರುವ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು/ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಜಾರಿ) ವಲಯಗಳಿಗೆ ಮಂಜೂರಾಗಿರುವ ವಾಹನ ಚಾಲಕರ ಹುದ್ದೆಗಳಲ್ಲಿ ಕೆಲವು ಹುದ್ದೆಗಳನ್ನು ಸದರಿ ಕೋಷ್ಟಕದ ಅಂಕಣ-4 ರಲ್ಲಿ ಕಾಣಿಸಿರುವ ವಾಣಿಜ್ಯ ತೆರಿಗೆಗಳ ಆಯುಕ್ತರು, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು, ವಲಯ-1, 2 ಮತ್ತು 3 ಹಾಗೂ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳಿಗೆ ರಾಜ್ಯದ ರಾಜಸ್ವ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಛೇರಿಗಳನ್ನು ಪುನರ್‌ವ್ಯವಸ್ಥೆ ಮಾಡುವ ಮೂಲಕ ಸ್ಥಳಾಂತರಗೊಳಿಸಿ ಆದೇಶಿಸಿದ್ದೇನೆ.

# ಕೋಷ್ಟಕ

| ಕ್ರ. ಸಂ. | ಪ್ರಸ್ತುತ ವಾಹನ ಚಾಲಕರ ಹುದ್ದೆಗಳು ಮಂಜೂರಾಗಿರುವ ಕಛೇರಿಗಳು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಹುದ್ದೆಗಳನ್ನು ಸ್ಥಳಾಂತರಗೊಳಿಸಿರುವ ಕಛೇರಿ ಮತ್ತು ಸ್ಥಳ | ಸ್ಥಳಾಂತರಿಸಿರುವ ಹುದ್ದೆಗಳ ಸಂಖ್ಯೆ | ಅಂಕಣ 4 ರಲ್ಲಿ ನಮೂದಿಸಿರುವ ಕಛೇರಿಗಳಲ್ಲಿ ಪ್ರಸ್ತುತ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಸ್ಥಳಾಂತರಿಸಿದ ನಂತರ ಅಂಕಣ 4 ರಲ್ಲಿ ನಮೂದಿಸಿರುವ ಕಛೇರಿಗಳಲ್ಲಿ ಲಭ್ಯವಾಗುವ ಹುದ್ದೆಗಳ ಸಂಖ್ಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ) ದಕ್ಷಿಣ ವಲಯ, ಬೆಂಗಳೂರು | 67 | ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಬೆಂಗಳೂರು | 7 | 2 | 9 |
| | | | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು, (ವಲಯ)-1, 2 ಮತ್ತು 3 ಬೆಂಗಳೂರು ತಲಾ 1 ರಂತೆ | 3 | 0 | 3 |
| | | | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ) ಡಿ.ಜಿ. & ಎಸ್.ಟಿ.ಓ- 1 ರಿಂದ 6, ಬೆಂಗಳೂರು ತಲಾ 4 ರಂತೆ | 24 | 0 | 24 |
| 2 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಮೈಸೂರು ವಲಯ, ಮೈಸೂರು | 9 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿ.ಜಿ. & ಎಸ್.ಟಿ.ಓ, ಮೈಸೂರು ವಿಭಾಗ, ಮೈಸೂರು | 3 | 2 | 5 |
| 3 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಪಶ್ಚಿಮ ವಲಯ, ಮಂಗಳೂರು | 11 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿ.ಜಿ. & ಎಸ್.ಟಿ.ಓ., ಮಂಗಳೂರು ವಿಭಾಗ, ಮಂಗಳೂರು | 5 | 7 | 12 |
| 4 | ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ) 1 ರಿಂದ 3, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಮಲೆನಾಡು ವಿಭಾಗ, ಶಿವಮೊಗ್ಗ. | 3 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಡಿ.ಜಿ. & ಎಸ್.ಟಿ.ಓ , ಮಲೆನಾಡು ವಿಭಾಗ, ಶಿವಮೊಗ್ಗ | 3 | 2 | 5 |

| | | | | | | |
|---|---|---|---|---|---|---|
| 5 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ | 11 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಡಿ.ಜಿ. & ಎಸ್.ಟಿ.ಓ, ಬೆಳಗಾವಿ ವಿಭಾಗ, ಬೆಳಗಾವಿ | 3 | 3 | 6 |
| 6 | ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ) 1 ರಿಂದ 4, ದಾವಣಗೆರೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಕೇಂದ್ರ ವಲಯ, ಬಳ್ಳಾರಿ | 5 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಡಿ.ಜಿ. & ಎಸ್.ಟಿ.ಓ , ದಾವಣಗೆರೆ | 2 * | 2 | 4 |

*** ಸರ್ಕಾರದ ಆದೇಶ ಸಂಖ್ಯೆ: ಆಇ 170 ವಾತೆಸಿ 2011 ದಿನಾಂಕ:07-8-2014 ರನ್ವಯ ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-5, ದಾವಣಗೆರೆ ಈ ಹುದ್ದೆಯನ್ನು ಚಿತ್ರದುರ್ಗಕ್ಕೆ ಸ್ಥಳಾಂತರಿಸಿದ ನಂತರ ಮೂಲ ಕಛೇರಿಯಲ್ಲಿ ಉಳಿದ ಒಂದು ವಾಹನ ಚಾಲಕರ ಹುದ್ದೆ ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿ(ಜಾರಿ)-4, ದಾವಣಗೆರೆ ಈ ಅಧಿಕಾರಿಗೆ ಒದಗಿಸಿರುವ ಒಂದು ವಾಹನ ಚಾಲಕರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ.**

ಹುದ್ದೆಗಳನ್ನು ಸ್ಥಳಾಂತರಿಸಿದ ನಂತರ ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ಖಜಾನೆಯಿಂದ ಸೆಳೆದು ವಿತರಿಸುವ ಅಧಿಕಾರ ವ್ಯಾಪ್ತಿಯನ್ನು ಅಂಕಣ-4 ರಲ್ಲಿ ಕಾಣಿಸಿರುವ ಕಛೇರಿ ಮುಖ್ಯಸ್ಥರುಗಳಿಗೆ ನೀಡಿ ಆದೇಶಿಸಿದೆ. (Pay drawing and disbursing Officer).

ಈ ಆದೇಶವು ತಕ್ಷಣದಿಂದ ಜಾರಿಗೆ ಬಂದಿದ್ದು ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ.

30/7/18

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

<u>ಪ್ರತಿ:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು, (ಜಾರಿ) ದಕ್ಷಿಣ ವಲಯ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಇಲಾಖೆಯ ಎಲ್ಲಾ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರುಗಳಿಗೆ/ಜಂಟಿ ಆಯುಕ್ತರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು ಸಿಬ್ಬಂದಿ-2, ಆಯುಕ್ತರ ಕಛೇರಿ ಇವರಿಗೆ ಮಾಹಿತಿಗಾಗಿ.
5. ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಸಂಚಲನ), ಆಯುಕ್ತರ ಕಛೇರಿ ಇವರಿಗೆ ಮಾಹಿತಿಗಾಗಿ.
6. ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, (ವೆಚ್ಚ) ಆಯುಕ್ತರ ಕಛೇರಿ ಇವರಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ..